International Journal of Kannada Research 2016; 2(1): 27-33

International Journal of Kannada Research
www.kannadajournal.com

**ISSN: 2454–5813**
IJSR 2016; 2(1): 27-33
© 2016 IJKS
www.kannadajournal.com
Received: 17-11-2015
Accepted: 20-12-2015

**Shankara ballenahalli**
Srirangapatna taluk
Mandya district
Karnataka state: 9844329790

**Dr. DT Basavaraj**
Professor in department of kannada study and research centre. Ksou.
Mukthagangothri.
Mysore.Karnataka.

**Correspondence**
**Shankara ballenahalli**
Srirangapatna taluk
Mandya district
Karnataka state: 9844329790

# ಶಾಸನೋಕ್ತ ಶ್ರೀರಂಗಪಟ್ಟಣ

## Shankara ballenahalli, Dr. DT Basavaraj

ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಜನತೆಯ ಇತಿಹಾಸ, ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು, ಅವರ ಜೀವನ ಮೌಲ್ಯಗಳು, ಸಂಸ್ಕೃತಿ ಮತ್ತು ಸಾಮಾಜಿಕ ಅಂಶಗಳನ್ನು ಒಳಗೊಂಡಿರುತ್ತದೆ. ಇತಿಹಾಸದ ವಿಷಯಗಳನ್ನು ಬಿಟ್ಟು ಉಳಿದ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳನ್ನು ಶಾಸನಗಳಿಂದ ತಿಳಿಯಬಹುದಾಗಿದೆ. ಹಿಂದೆ ರಾಜರ ಆಜ್ಞೆಗಳೇ ಶಾಸನಗಳಾಗಿದ್ದವು. ತಾಳೆಪತ್ರದ ಮೇಲೆ, ತಾಮ್ರಪಟಗಳ ಮೇಲೆ, ಶಿಲೆಗಳ ಮೇಲೆ, ಲೋಹಗಳ ಮೇಲೆ ಹಾಗೂ ಇನ್ನಿತರ ಕೆಲವಸ್ತುಗಳ ಮೇಲೆ 'ಶಾಸನ'ಗಳನ್ನು ಬರೆಸುತ್ತಿದ್ದುದಾಗಿ ತಿಳಿದು ಬರುತ್ತದೆ. ಕ್ರಮೇಣ ರಾಜರಲ್ಲದವರು ದಾನ–ದತ್ತಿ ನಿಡಲ್ಪಟ್ಟ ವಿಷಯಗಳನ್ನು ಹೇಳುವ ಬರಹಗಳಿಗೂ ಶಾಸನಗಳೆಂಬ ಹೆಸರು ರೂಢಿಗೆ ಬಂದಿದೆ. ಇಂತಹ 122 ದಾನ ಶಾಸನಗಳು ಶ್ರೀರಂಗಪಟ್ಟಣ ದ್ವೀಪದಲ್ಲಿ ಕಂಡು ಬಂದಿರುತ್ತದೆ.

**ಶಾಸನಗಳು, ಶ್ರೀರಂಗಪಟ್ಟಣ**

**ಪೀಠಿಕೆ**

ಶ್ರೀರಂಗಪಟ್ಟಣ ಪ್ರದೇಶವು ಗಂಗವಾಡಸಿ–96,000 ದ ಭಾಗವಾಗಿ ಗೋಚರಿಸುತ್ತದೆ. ಶ್ರೀರಂಗಪಟ್ಟಣಕ್ಕೆ ಸಂಬಂಧಿಸಿದಂತೆ ಗಂಗರ ಕಾಲದಿಂದ ಶಾಸನಗಳು ಕಂಡು ಬರುತ್ತವೆ. ಚೋಳರು, ಹೋಯ್ಸಳರು, ವಿಜಯನಗರದ ಸಾಮಂತರು, ಮೈಸೂರು ಒಡೆಯರು ಮತ್ತು ಹೈದರಾಲಿ ಹಾಗೂ ಟಿಪ್ಪುಸುಲ್ತಾನರು ಇಲ್ಲಿ ಆಳ್ವಿಕೆ ಮಾಡಿದುದು ಇತಿಹಾಸ ದಾಖಲೆಗಳಿಂದ ತಿಳಿದು ಬರುತ್ತದೆ. ಹಿಂದೂ,ಜೈನ, ಮುಸಲ್ಮಾನ ಮತ್ತು ಕ್ರೈಸ್ತ ಧರ್ಮದ ಜನರು ಈ ಪ್ರದೇಶದಲ್ಲಿ ಬಹು ಹಿಂದಿನಿಂದಲೂ ವಾಸಿಸುತ್ತಿದ್ದಾರೆ. ಈ ಪ್ರದೇಶವನ್ನು ಒಳಗೊಂಡಂತೆ ಆಳ್ವಿಕೆ ಮಾಡಿದ ರಾಜ ಮಹಾರಾಜರು ಹಲವಾರು ದತ್ತಿ–ದಾನಗಳು, ಕೊಡುಗೆಗಳು, ಲೋಕೋಪಯೋಗಿ ಕೆಲಸಗಳನ್ನು ಮಾಡಿದ್ದಾರೆ. ಪೂಜಾಮಂದಿರಗಳನ್ನು ನಿರ್ಮಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ 'ಶಾಸನ' ಗಳನ್ನು ರೂಪಿಸಿರುವುದು ಕಂಡು ಬರುತ್ತದೆ. ಹಲವು ಶಾಸನಗಳು ನೈಸರ್ಗಿಕ ವಿಕೋಪಗಳಾದ ಮಳೆ, ಗಾಳಿ, ಬಿಸಿಲುಗಳಿಂದಾಗಿ ಮತ್ತು ಜನಸಾಮಾನ್ಯರ ನಿರ್ಲಕ್ಷ್ಯದಿಂದಾಗಿ ನಾಶವಾಗಿದ್ದರೆ, ಕೆಲವು ಅವಸಾನದ ಅಂಚಿನಲ್ಲಿವೆ.

ಪರಿಷ್ಕಾರಗೊಂಡು ಪ್ರಕಟಗೊಂಡಿರುವ ಎಫಿಗ್ರಾಫಿಯಾ ಕರ್ನಾಟಕ ಸಂಪುಟ ಮಾಲಿಕೆಯ ಆರನೆಯ ಸಂಪುಟದಲ್ಲಿ ಶ್ರೀರಂಗಪಟ್ಟಣ (ಕ್ರಿ.ಪ)ದ 122 ಶಾಸನಗಳನ್ನು ದಾಖಲಿಸಲಾಗಿದೆ. ಇವುಗಳಲ್ಲಿ ಶ್ರೀರಂಗಪಟ್ಟಣ ದ್ವೀಪಕ್ಕೆ ಸಂಬಂದಿಸಿದಂತೆ ಅರವತ್ತಾರು ಶಾಸನಗಳು ಕಂಡು ಬರುತ್ತವೆ. ಹೆಚ್ಚಿನವು ದಾನಶಾಸನಗಳಾಗಿದ್ದು, ಉಳಿದಂತೆ ದೇವಾಲಯಗಳ ನಿರ್ಮಾಣ, ದುರಸ್ತಿ, ಜೀರ್ಣೋದ್ಧಾರ, ದೇವಾಲಯದ ಅಭಿವೃದ್ಧಿಗೆ ನೀಡಿರುವ ಒಡವೆ, ಪೂಜಾ ಸಾಮಗ್ರಿಗಳು, ಚಿನ್ನ, ಬೆಳ್ಳಿ, ತಾಮತ್ರ ಇನ್ನಿತರ ಲೋಹದ ಪಾತ್ರೆಗಳು ಶಾಸನದಲ್ಲಿ ದಾಖಲಿಸಲ್ಪಟ್ಟಿವೆ. ಮಸೀದಿಗಳ ನಿರ್ಮಾಣ, ಬಸದಿಯ ಜೀರ್ಣೋದ್ಧಾರ, ತಮ್ಮ ದೇವರುಗಳನ್ನು ಸ್ತುತಿಸಿರುವುದು ಹಾಗೂ ರಾಜಮನೆತನಗಳ ವಂಶಾವಳಿಗಳು, ಜನೋಪಯೋಗಿ ಕೆಲಸಗಳು, ಸುಂಕ ವಿನಾಯಿತಿ ಇನ್ನಿತರ ಕೊಡುಗೆಗಳಿಗೆ ಸಂಬಂಧಿಸಿದವುಗಳು, ಸುಂಕ ವಿನಾಯಿತಿ ಇನ್ನಿತರ ಕೊಡುಗೆಗಳಿಗೆ ಸಂಬಂಧಿಸಿದವುಗಳಾಗಿವೆ. ಈ ವಿಷಯಕ್ಕೆ ಸಂಬಂದಿಸಿದಂತೆ ಶಾಸನಗಳನ್ನು ಈ ಲೇಖನದಲ್ಲಿ ಪರಿಶೀಲಿಸಲಾಗಿದೆ.

**ಕ್ಷೇತ್ರ ಅಧ್ಯಯನ ಹಾಗೂ ಸಂದರ್ಶನ : ಶ್ರೀರಂಗಪಟ್ಟಣ ದ್ವೀಪದ ಕ್ಷೇತ್ರ ಅಧ್ಯಯನ ಹಾಗೂ ಸಂದರ್ಶನ ಪ್ರಕ್ರಿಯೆಯಲ್ಲಿ ಕಂಡು ಬಂದ ಶಾಸನಗಳು ಈ ಕೆಳಕಂಡಂತೆ**

| | | |
|---|---|---|
| **ಶ್ರೀರಂಗಪಟ್ಟಣ ಶಾಸನಗಳು** | **–** | **66** |
| 1. ರಂಗನಾಥ ದೇವಸ್ಥಾನದ ಶಾಸನಗಳು | – | 26 |
| a. ಗೋಡೆಮೇಲಿನ ಶಾಸನಗಳು | – | 9 |
| b. ಕಂಬಗಳ ಮೇಲೆ | – | 2 |
| c. ದೇವಾಲಯಕ್ಕೆ ನೀಡಿರುವ ದಾನ ಪಾತ್ರೆಗಳ ಮೇಲೆ | – | 7 |
| d. ನೆಟ್ಟಕಲ್ಲುಗಳು | – | 2 |
| e. ಶ್ರೀಭಂಡಾರ (ಖಜಾನೆ) ದಲ್ಲಿರುವ ತಾಮ್ರಶಾಸನ | – | 6 |
| ಒಟ್ಟು | = | 26 |

| | | | |
|---|---|---|---|
| 2. | ಗಂಗಾಧರೇಶ್ವರ ಶಾಸನ | – | 5 |
| 3. | ನರಸಿಂಹ ದೇವಾಲಯ | – | 4 |
| 4. | ಪೇಟೆಯಲ್ಲಿರುವ ರಾಮದೇವಾಲಯ | – | 2 |
| 5. | ಆದೀಶ್ವರ ಬಸದಿ | – | 1 |
| 6. | ಕಾಳಮ್ಮನ ದೇವಾಲಯ | – | 5 |
| 7. | ಮಾರಮ್ಮನ ಗುಡಿ | – | 1 |
| 8. | ಸಂಗಿನ್ ಮಸೀದಿ | – | 5 |
| 9. | ಚಂದ್ರವನ | – | 4 |
| 10. | ಗುಂಬಜ್ (ಗಂಜಾಂ) | – | 7 |
| 11. | ಕೊತ್ವಾಲ ನಾರಣಪ್ಪನಲ್ಲೆದ ಶಾಸನ (ಗಂಜಾಂ) | – | 1 |
| 12. | ವೆಸ್ಲಿ ಸೇತುವೆಯ ಬಳಿ | – | 1 |
| 13. | ಉತ್ತರ ಕಾವೇರಿ ಸೇತುವೆ | – | 1 |
| 14. | ಊರಿನ ಉತ್ತರದಲ್ಲಿರುವ ರಣಕಂಬ | – | 1 |
| 15. | ಪಶ್ಚಿಮವಾಹಿನಿ ಗೌತಮ ಮಂಟಪ | – | 1 |
| 16. | ಕೋಟೆಯ ಆನೆ ಬೇಗಿಲ ಮೇಲೆ | – | 1 |

**ಒಟ್ಟು = 66 ಶಾಸನಗಳು**

ಈ ಶಾಸನಗಳಲ್ಲಿ ಬಹುಪಾಲು ಕನ್ನಡ ಭಾಷೆಯಲ್ಲಿವೆ. ಆರಂಭದಲ್ಲಿ ಸಂಸ್ಕೃತ ಭಾಷೆ, ತರುವಾಯದಲ್ಲಿ ಕನ್ನಡ ಭಾಷೆ, ಹೀಗೆ ಸಂಸ್ಕೃತ ಕನ್ನಡಗಳ ಮಿಶ್ರಣದಿಂದ ಕೂಡಿದ ಶಾಸನಗಳೂ ಇವೆ. ತಮಿಳು, ತೆಲುಗು ಭಾಷೆಗಳಲ್ಲೂ ಕೆಲವು ಶಾಸನಗಳಿವೆ. ಕಡಿಮೆ ಸಂಖ್ಯೆಯಲ್ಲಿ ಪರ್ಷಿಯನ್ ಮತ್ತು ಇಂಗ್ಲೀಷ್ ಭಾಷೆಯ ಶಾಸನಗಳಿವೆ. ಈ ಎಲ್ಲಾ ಶಾಸನಗಳು ಗಂಗ, ಚೋಳ, ಹೊಯ್ಸಳ, ವಿಜಯನಗರ, ಮೈಸೂರು ಅರಸರು, ಹೈದರಾಲಿ, ಟಿಪ್ಪುಸುಲ್ತಾನ್ ಮತ್ತು ಬ್ರಿಟಿಷರ ಆಳ್ವಿಕೆಯ ವಿವಿಧ ಕಾಲಾವಧಿಗಳಿಗೆ ಸೇರಿದವಾಗಿವೆ. ರಾಜಮನೆತನಗಳು ಆಳಿದ ಸಂದರ್ಭದಲ್ಲಿ ರಚಿಸಲ್ಪಟ್ಟ ದಾನ ಶಾಸನಗಳೇ ಅತಿ ಹೆಚ್ಚು ಕಂಡು ಬರುತ್ತವೆ.

ಸುಮಾರು ಶೇಕಡ ಎಪ್ಪತ್ತು ಭಾಗವನ್ನು ಶಾಸನಗಳು ಶ್ರೀರಂಗಪಟ್ಟಣ ಪ್ರದೇಶದಲ್ಲಿ ದಾಣ ಶಾಸನಗಳಾಗಿವೆ. ದೇವಾಲಯಗಳನ್ನು ಹೊಸದಾಗಿ ಕಟ್ಟಿಸುವುದು ಜೀರ್ಣೋದ್ದಾರ ಮಾಡಿ ವಿಸ್ತರಿಸುವುದು, ಹೊಸ ದೇವಾಲಯಗಳಲ್ಲಿ ಹಳೆಯ ದೇವರುಗಳನ್ನು ಪ್ರತಿಷ್ಠಾಪಿಸುವುದು, ಅಲ್ಲಿ ನಡೆಯ ಬೇಕಾದ ಪೂಜಾಕಾರ್ಯಗಳಿಗೆ ಪೂಜಾಸಾಮಗ್ರಿಗಳು, ದೀಪ, ತಟ್ಟೆ, ಒಡವೆ, ವಸ್ತ್ರ, ವಿಗ್ರಹಮೂರ್ತಿ, ಇನ್ನಿತರ ವಸ್ತುಗಳನ್ನು ಮತ್ತು ಭೂಮಿಯನ್ನು ದಾನವಾಗಿ ಕೊಡುವುದು, ಕೆರೆ–ಕಟ್ಟೆ–ಕಾಲುವೆ–ಕಲ್ಯಾಣಿ ಮುಂತಾದವುಗಳನ್ನು ನಿರ್ಮಿಸುವುದು ಹಾಗೂ ಅವುಗಳನ್ನು ನವೀಕರಿಸುವುದು ಮುಂತಾದ ಧರ್ಮಕಾರ್ಯಗಳನ್ನು ಮಾಡಿದಾಗ ನೆನಪಿಗಾಗಿ ರಚಿಸಿದ ಶಾಸನಗಳೇ ದಾನ ಶಾಸನಗಳು.

ತಲಕಾಡಿನ ಗಂಗರು ಶ್ರೀರಂಗಪಟ್ಟಣವೂ ಸೇರಿದಂತೆ ಈ ಪ್ರದೇಶದಲ್ಲಿ ಕ್ರಿ.ಶ.ನಾಲ್ಕನೇ ಶತಮಾನದಿಂದ ಹತ್ತನೇ ಶತಮಾನದವರೆವಿಗೂ ಆಳ್ವಿಕೆ ಮಾಡಿದುದು ತಿಳಿದು ಬರುತ್ತದೆ. "ಕ್ರಿ.ಶ.894ರಲ್ಲಿ ಗಂಗರ ಅಧಿಕಾರಿಯಾಗಿದ್ದ 'ತಿರುಮಲ್ಲಯ್ಯ' ಎಂಬುವನು ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯವನ್ನು ಕಟ್ಟಿಸಿದನು"[1] ಎಂದು ಶಾಸನದಲ್ಲಿ ದಾಖಲಾಗಿರುವುದರ ಬಗ್ಗೆ ಅಭಿಪ್ರಾಯವಿದೆ. ಆದರೆ ಈ ಶಾಸನವಿಂದು ದಾಖಲಾಗಿರುವುದರ ಬಗ್ಗೆ ಅಭಿಪ್ರಾಯವಿದೆ. ಆದರೆ ಈ ಅಂಶವನ್ನು ಒಪ್ಪಿರುವುದಿಲ್ಲ. ಆದರೂ ಇತಿಹಾಸ ಸಂಶೋಧಕರು ಈ ಅಂಶವನ್ನು ಒಪ್ಪಿರುವುದು ವಿಶ್ಲೇಷಣೆಯಿಂದ ತಿಳಿದು ಬರುತ್ತದೆ. ತದ ನಂತರ ಬಂದ ಹೋಯ್ಸಳರು ಈ ದೇವಾಲಯವನ್ನು ಅಭಿವೃದ್ಧಿ ಪಡಿಸಿದರಾದರೂ ಆ ಬಗ್ಗೆ ನಮಗೆ ಯಾವ ಶಾಸನಗಳೂ ದೊರಕುವುದಿಲ್ಲ.

ಶ್ರೀರಂಗನಾಥ ದೇವಾಲಯಕ್ಕೆ ಸಂಬಂಧಿಸಿದಂತೆ ಅಧಿಕೃತ ದಾನ ಶಾಸನ ಸಿಗುವುದು ವಿಜಯನಗರದ ಅರಸರ ಕಾಲದಲ್ಲಿಯೆ. ಶ್ರೀರಂಗನಾಥ ದೇವಾಲಯದ ಭಂಡಾರದಲ್ಲಿರುವ ಐದನೆಯ ತಾಮ್ರ ಶಾಸನವು ಕ್ರಿ.ಶ.1352 ರಲ್ಲಿ ಆಳ್ವಿಕೆ ಮಾಡುತ್ತಿದ್ದ ವಿಜಯನಗರ ಅರಸು ಎರಡನೇ ದೇವರಾಜನು ಈ ದೇವಾಲಯಕ್ಕೆ "ತೋರಿನಾಡಿನ ಮೇನಾಪುರ ಮತ್ತು ಚಂದುಗಾಲ ಗ್ರಾಮಗಳನ್ನು 'ರತ್ನದೇನು' ದಾನ ನೀಡುವ ಸಂದರ್ಭದಲ್ಲಿ ದತ್ತಿ ನೀಡಿದರು"[2] ಎಂದು ತಿಳಿದು ಬರುತ್ತದೆ. ಈ ಶಾಸನ ಸಂಸ್ಕೃತ ಭಾಷೆಯಲ್ಲಿರುವುದು ಕಂಡು ಬರುತ್ತದೆ. ಇದೇ ದೇವಾಲಯದ ಉತ್ತರಗೋಡೆಗೆ ಪೂರ್ವಾಭಿಮುಖವಾಗಿ ನೆಟ್ಟಕಲ್ಲು ಶಿಲಾ ಶಾಸನ ವಿಜಯನಗರದರಸು ವೀರಪ್ರತಾಪ ದೇವರಾಯರ ಕಾಲಕ್ಕೆ ಸೇರಿದುದಾಗಿದ್ದು, "ಶ್ರೀರಂಗನಾಥದೇವರ ನಿತ್ಯ ಪೂಜೆಗಾಗಿ ಖಜಾನೆಯಿಂದ ಮೂವತ್ತು ಹೊನ್ನನು ದೇವರಾಜ ಓಡೆಯರು ವಸಂತೋತ್ಸವ ಹಬ್ಬದ ನಿಮಿತ್ತ ಶತಪುರುಷ 1354ರಲ್ಲಿ ನೀಡಿದುದು"[3] ಎಂದು ಬರೆಸಲಾಗಿದೆ. ಅದೇ ದೇವಾಲಯದ ಹೊರ ಪ್ರಾಕಾರದಲ್ಲಿ ಪೂರ್ವ ಕಡೆ ನೆಟ್ಟ;ಕಲ್ಲು ಶಿಲಾಶಾಸನ ತಮಿಳು ಭಾಷೆಯಲ್ಲಿದ್ದು 15ನೇ ಶತಮಾನದ್ದಾಗಿದೆ. ಶಾಸನವು ಅಸ್ಪಷ್ಟವಾಗಿದ್ದು "ಶ್ರೀರಂಗನಾಥ ದೇವಾಲಯಕ್ಕೆ ಪೆರುಮಾಳ್...... ಸುಣ್ಣ ಬಳಿಸಿದುದಾಗಿ ಬರೆಯಲಾಗಿದೆ."[4]

ಶ್ರೀರಂಗನಾಥ ದೇವಾಲಯದ ಉತ್ತರದ ಗೋಡೆಯ ಕಲ್ಲಿನ ಶಿಲಾ ಶಾಸನವು ವಿಜಯನಗರದ ಅರಸು ಕೃಷ್ಣರಾಯ ಮಹಾರಾಯರ ಕಾಲಕ್ಕೆ ಸೇರಿದುದಾಗಿದ್ದು, "ಕೃಷ್ಣರಾಯ ನಾಯಕನು ಈ ದೇವಾಲಯದ ನಿತ್ಯಪೂಜೆ ಮತ್ತು ಪ್ರಸಾದಕ್ಕಾಗಿ ಬೀರಶೆಟ್ಟರಹಳ್ಳಿ ಗ್ರಾಮವನ್ನು ದತ್ತಿ ಬಿಟ್ಟರು ಎಂದು ಬರೆಸಲಾಗಿದೆ.[5]

ಅದೇ ದೇವಾಲಯದ ಹೊರಪ್ರಾಕಾರದಲ್ಲಿ ಉತ್ತರಕಡೆ ಬೃಂದಾನವನದ ಬಳಿ ಇರುವ ಶಿಲಾಶಾಸನದಲ್ಲಿ "ಕ್ರಿ.ಶ.1464ರಲ್ಲಿ ವಿಜಯನಗರದ ಅರಸು ಅಚ್ಯುತದೇವರಾಯರು ಆಳುತ್ತಿರಲು, ಶ್ರೀರಂಗಪಟ್ಟಣ ಪ್ರಾಂತ್ಯದ ಗ್ರಾಮ, ಅಗ್ರಹಾರಗಳ ಎಲ್ಲಾ ಒಟ್ಟು ಶುಲ್ಕದ 300 ಗದ್ಯಾಣಗಳನ್ನು ಇಲ್ಲಿನ ಪಾರುಪತ್ಯ ನೋಡಿಕೊಳ್ಳುತ್ತಿದ್ದ ರಾಮಪ್ಪನಾಯಕರ ನೇತೃತ್ವದಲ್ಲಿ ವಿಜಯನಗರದ ಅರಸುರಿಗೆ ಒಳ್ಳೆಯದಾಗಲಿ ಎಂದು ಬಯಸಿ, ಶ್ರೀರಂಗನಾಥ ದೇವಾಲಯಕ್ಕೆ

[1] ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ಇತಿಹಾಸ, ಪುಟ.49.

[2] ಎಫಿಗ್ರಾಫಿಯ ಕರ್ನಾಟಕ, ಸಂ.6, ಶ್ರೀ.ಪ. ಶಾಸನ, ಪುಟ 359

[3] ಅದೇ. ಶಾ.3.ಪು.334

[4] ಅದೇ. ಶಾ.2.ಪು.332

[5] ಅದೇ. ಶಾ.5.ಪು.335

ಸಮರ್ಪಿಸುವುದು ಎಂದು ಬರೆಯಲಾಗಿದೆ[6].

ಶ್ರೀರಂಗಪಟ್ಟಣದ ಮುಖ್ಯ ಬೀದಿಯಲ್ಲಿ ನಾಯಿಂದರಿಗೆ ಸೇರಿದ 'ಪೇಟೆ ರಾಮದೇವರ' ದೇವಾಲಯವಿದ್ದು, ಈ ದೇವಾಲಯದಲ್ಲಿ ಕ್ರಿ.ಶ. 1459ರ ವಿಜಯನಗರದ ಅರಸು ಶ್ರೀರಂಗರಾಯರ ಕಾಲದಲ್ಲಿನ ಗೋಡೆಯ ಮೇಲಿನ ಶಾಸನವು ಒಳಬಾಗಿಲ ಎಡಭಾಗದಲ್ಲಿ ಕಂಡು ಬರುತ್ತದೆ. "ಶ್ರೀರಂಗಪಟ್ಟಣ ಸೀಮೆಯ" 'ನಾಯಿಂದ'ರಿಗೆ ಕೆಲವು ಸುಂಕ ವಿನಾಯಿತಿ ನೀಡಿದುದಾಗಿ ಬರೆಸಲಾಗಿದೆ".[7]

ವಿವಿಧ ರಾಜರುಗಳ ಆಳ್ವಿಕೆಯ ಸಂದರ್ಭಗಳಲ್ಲಿ ಅವರ ಸಾಮಂತರು, ಅನುಯಾಯಿಗಳು ಅಥವಾ ದೇವರ ಭಕ್ತರುಗಳು ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿರುವುದು ಕಂಡು ಬರುತ್ತದೆ. ಶ್ರೀರಂಗನಾಥ ದೇವಾಲಯದಲ್ಲಿನ ಶ್ರೀ ಭಂಡಾರದಲ್ಲಿರುವ ತಾಮ್ರ ಶಾಸನವು ಮೂರು ಹಲಗೆಯ ಎರಡು ಮಗ್ಗುಲಲ್ಲಿ ಸಂಸ್ಕೃತ ಭಾಷೆಯಲ್ಲಿ ಬರೆಸಲಾಗಿದೆ. "ಕ್ರಿ.ಶ.1370ರಲ್ಲಿ ವಿಜಯನಗರದ ಅರಸು ಎರಡನೇ ದೇವರಾಯ ಇವರ ಪರವಾಗಿ ನಾಗದೇವರಭಟ್ಟರ ಮಕ್ಕಳು ದೇವರು ಭಟ್ಟರಿಗೆ ವಿರೂಪಾಕ್ಷ ಸನ್ನಿಧಿಗೆ ಹಾಗಲಹಳ್ಳಿ, ಅರಲುಕುಪ್ಪೆ, ಬಸ್ತಿಹಳ್ಳಿ, ಮಲ್ಲೇನಗೋಳಿಗಳನ್ನು ದತ್ತಿ ಬಿಟ್ಟ ವಿಚಾರ ತಿಳಿಸುತ್ತದೆ".[8] ಅದದೇ ದೇವಾಲಯದ ಉತ್ತರಗೋಡೆಯ ಶಿಲಾಶಾಸನ ಇದಾಗಿದೆ. ಕ್ರಿ.ಶ.1450ರಲ್ಲಿ ವಿಜಯನಗರದ ಅರಸು ಕೃಷ್ಣದೇವರಾಯ ಮಹಾರಾಯರ ಕಾಲದಲ್ಲಿ ಬೋಗಯ್ಯದೇವನೆಂಬ ಮಹಾಮಂಡಳೇಶ್ವರನು ಈ ದೇವಾಲಯಕ್ಕೆ ದೀಪ ಹಚ್ಚಲು ಮತ್ತು ಪ್ರಸಾದಕ್ಕಾಗಿ ಶ್ರೀರಂಗಪಟ್ಟಣ ಸೀಮೆಯ ಗುಮ್ಮನಹಟ್ಟಿ ಗ್ರಾಮವನ್ನು ರಾಣಿ 'ನಾಗಾಂಬಾ' ರವರ ಹೆಸರಲ್ಲಿ 'ನಾಗಲಾಪುರ' ಎಂದು ಬದಲಾಯಿಸಿ ದತ್ತಿ ಬಿಟ್ಟ ವಿಷಯ ಬರೆಸಲಾಗಿದೆ",[9] ಅದೇ ದೇವಾಲಯದ ಒಳಪ್ರಾಕಾರದ ದಕ್ಷಿಣ ಗೋಡೆಯ ಮೇಲೆ 16ನೇ ಶತಮಾನದಲ್ಲಿ ಬರೆಸಿದ ಗೋಡೆ ಶಾಸನ ಇದಾಗಿದ್ದು, "ವಿಜಯನಗರದ ಅರಸು ತಿರುಮಲರಾಯರ ಮಗ ರಾಮರಾಜರು ಶ್ರೀರಂಗನಾಥ ಗುಡಿಯ ಪ್ರಸಾಧ ಹರಿವಾಣಕ್ಕಾಗಿ ಬಾಣಗಟ್ಟೆ ಗ್ರಾಮವನ್ನು ಧಾರೆಯಾಗಿ ನೀಡಿದುದನ್ನು ಬರೆಯಲಾಗಿದೆ"[10]

ಶ್ರೀರಂಗ ದೇವಾಲಯದ ಭಂಡಾರದಲ್ಲಿರುವ ಎರಡನೇಯ ತಾಮ್ರಶಾಸನವು ಕ್ರಿ.ಶ.1586 ರಲ್ಲಿ ದಾನ ನೀಡಿದುದರ ಬಗ್ಗೆ ತೆಲುಗಿನಲ್ಲಿ ಬರೆಸಲಾಗಿದೆ. "ವಿಜಯನಗರದ ಅರವೀಡು ವಂಶದ ರಾಜ 'ತಿರುವೆಂಕಟರಾಯರ' ಮಗ 'ಚೋಲಿವೆಂಕಟಪತಿ' ಭೂದಾನ ಮಾಡಿದ ಶಾಸನ ಇದಾಗಿದೆ. ಬಡಗನಾಡು ಸೀಮೆಯ ಹಿರೆಕೋಲೆ ಗ್ರಾಮವನ್ನು ದಾನವಾಗಿ ನೀಡಿದ ಮಾಹಿತಿ ಇದಾಗಿದೆ".[11] ಅದೇ ದೇವಾಲಯದ ಭಂಡಾರದಲ್ಲಿರುವ ತಾಮ್ರಶಾಸನವು ಕನ್ನಡ ಭಾಷೆಯಲ್ಲಿದ್ದು ಕ್ರಿ.ಶ.1585ರಲ್ಲಿ ಬರೆಸುದುದಾಗಿದೆ. "ಶ್ರೀ ದೇವರಾಜ ಒಡೆಯರವರು ಆಳ್ವಿಕೆ ಮಾಡುತ್ತಿರಲು ಇವರ ಮಗ ಮರಿದೇವರಾಜ ಒಡೆಯರು ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ಮತ್ತು ಶ್ರೀರಂಗ ನಾಯಕಿ ಅಮ್ಮನವರ ಸೇವೆಗಾಗಿ ಬಂನಂಗಾಣ, ಮೂಡಲಸೀಮೆ, ತೆಂಕಾಲ ಮಲ್ಯೆಯನಲ್ಲಿ, ಪಡುವಲಂ ಬಸ್ತಿಹಳ್ಳಿ, ಅಲ್ಲಪ್ಪನ ಹಳಿಗಳನ್ನು ದತ್ತಿಯಾಗಿ ನೀಡಿದುದರ ವಿವರವನ್ನು ಒಳಗೊಂಡಿದೆ".[12] ಶ್ರೀರಂಗ ದೇವಾಲಯುದ ಖಜಾನೆಯಲ್ಲಿರುವ ಕ್ರಿ.ಶ.1488ರಲ್ಲಿ ಸಂಸ್ಕೃತದಲ್ಲಿ ಬರೆಸಲಾದ ತಾಮ್ರಶಾಸನ ಇದಾಗಿದ್ದು, "ವಿಜಯನಗರ ಅರಸು ಕೃಷ್ಣರಾಯರು ನಾಗಮಂಗಲ ಪ್ರಾಂತ್ಯದ ಚಿಕ್ಕಾಜಿಹಳ್ಳಿ, ಚನ್ನಪಟ್ಟಣ ಪ್ರಾಂತ್ಯದ ಹಲವು ಮರಡಿ, ಹೊಸಹಳ್ಳಿ ಮುಂತಾದ ಗ್ರಾಮಗಳನ್ನು ತುಂಗಭದ್ರಾ ತೀರದ ವಿರೂಪಾಕ್ಷದೇವರ 'ಬ್ರಾಹ್ಮಣ್ಯತ್ವಕ್ಕಾಗಿ ವ್ಯಾಸತೀರ್ಥರಿಗೆ ದತ್ತಿನೀಡಿದ ಬಗ್ಗೆ ತಿಳಿಸುತ್ತವೆ.[13] ಇದೇ ದೇವಾಲಯದ ಅದೇ ಭಂಡಾರದಲ್ಲಿರುವ ನಾಲ್ಕನೇ ತಾಮ್ರಶಾಸನ ಇದಾಗಿದ್ದು ಕನ್ನಡ ಮತ್ತು ಸಂಸ್ಕೃತ ಕ್ರಿ.ಶ.1608ರಲ್ಲಿ ಬರೆಯಲಾಗಿದೆ. "ಕೋದಂಡರಾಮ ಸ್ವಾಮಿಯವರ ಶ್ರೀ ಭಂಡಾರಕ್ಕೆ ಪೂಜಾ ಕೈಂಕರ್ಯ ಕೈಗೊಳ್ಳಲು ಚಿಕ್ಕದೇವ ಒಡೆಯರ ಅಪ್ಪಣೆ ಪಡೆದು ದೊಡ್ಡ ದೇವಯ್ಯನವರು ಬಳುಗುಳದ ಅವ್ವೇರಹಳ್ಳಿ ಗ್ರಾಮವನ್ನು ದತ್ತಿ ನೀಡಿದ್ದುದರ ಬಗ್ಗೆ ಬರೆಯಲಾಗಿದೆ".[14]

ಹೊಸದಾಗಿ ದೇವಾಲಯಗಳನ್ನು ನಿರ್ಮಿಸಿದಾಗ ಹೊಲಗದ್ದೆಗಳನ್ನು ದತ್ತಿಯಾಗಿ ನೀಡುವುದು, ಶಿಥಿಲಗೊಂಡಿದ ದೇವಾಲಯಗಳನ್ನು ದುರಸ್ತಿ ಪಡಿಸಿದಾಗ ಹಾಗೂ ಸುಸ್ಥಿತಿಯಲ್ಲಿದ್ದರೂ ಹೆಚ್ಚಿನ ಉತ್ಪನ್ನವಿಲ್ಲದೆ ದೇವಾಲಯಗಳಿಗೆ ದಾನಧರ್ಮಗಳನ್ನು ನೀಡಿದಾಗಲೂ ಬರೆಸಿದ ಶಾಸನಗಳು ಕಂಡು ಬರುತ್ತವೆ.

ಶ್ರೀರಂಗಪಟ್ಟಣದ ಪ್ರಸನ್ನ ವೆಂಕಟರಮಣಸ್ವಾಮಿಯ ಗುಡಿಯಲ್ಲಿರುವ ಶಿಲಾಶಾಸನ ಕ್ರಿ.ಶ.1750ರಲ್ಲಿ ಬರೆಸಿದುದಾಗಿದೆ. "ಶ್ರೀಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ತಿಮ್ಮಣ್ಣನ ಮಗ ತುಪ್ಪದ ವೆಂಕಟಪ್ಪ ರಂಗನಾಥದೇವಾಲಯದ ಪ್ರಾಕಾರ ವಾಯುವ್ಯ ದಿಕ್ಕಿನಲ್ಲಿರುವ ಶ್ರೀಪ್ರಸನ್ನ ವೆಂಕಟರಮಣಸ್ವಾಮಿಯವರ ಪಾದಾರವಿಂದಕ್ಕೆ ಮುಂದಣ ಶಿಲಾ ಮಂಟಪಗಳು, ಬಾವಿ ಕಟ್ಟಿಸಿ ಸಮರ್ಪಿಸುವ ವಿವರ ಬರೆಯಲಾಗಿದೆ". ಶ್ರೀರಂಗಪಟ್ಟಣದ ಮಾರಮ್ಮನ ಗುಡಿಯಲ್ಲಿ ನೆಟ್ಟಿರುವ ಕಲ್ಲಿನ ಕಂಬ ಶಾಸನ[15] ಶ್ರೀರಂಗಪಟ್ಟಣದ ಮಾರಮ್ಮನ ಗುಡಿಯಲ್ಲಿ ನೆಟ್ಟಿರುವ ಕಲ್ಲಿನ ಕಂಬ ಶಾಸನ ಇದಾಗಿದ್ದು, ಕ್ರಿ.ಶ.1785ರಲ್ಲಿ ಮಾರಮ್ಮನ ಗುಡಿಯನ್ನು ಹನುಂತನ ಮಗ ಬಿಲ್ಲ ತಿಮ್ಮಯ್ಯ ಮತ್ತು ಇತರರು ಸೇರಿ ಜೀರ್ಣೋದ್ಧಾರ ಮಾಡಿದುದರ ಬಗ್ಗೆ ಇಲ್ಲಿ ನೆಟ್ಟಿರುವ ಕಲ್ಲಿನಲ್ಲಿ ಬರೆಯಲಾಗಿದೆ.[16]

ಶ್ರೀರಂಗಪಟ್ಟಣದ ಮೂರು ಸುತ್ತಿನ ಕೋಟೆಯ ಮೈಸೂರು ಗೇಟಿನ ಪಕ್ಕದಲ್ಲಿ ಟಿಪ್ಪುಸುಲ್ತಾನನು ಕ್ರಿ.ಶ.1791ರಲ್ಲಿ 'ಆನೆ ಬಾಗಿಲ'ನ್ನು ನಿರ್ಮಿಸಿದ್ದು, ಬಾಗಿಲ ಮೇಲೆ ಪರ್ಶಿಯನ್ ಭಾಷೆಯಲ್ಲಿ ಭಿತ್ತಿ ಶಾಸನವೊಂದನ್ನು ಬರೆಸಲಾಗಿದೆ. "ಮುಸ್ಲೀಂ ಪಂಚಾಂಗದ ಪ್ರಕಾರ ಇದರ ಉದ್ಘಾಟನೆ ಮಂಗಳವಾರ 9ನೇ ತಾರೀಖು ಕೌಶರ್ವಿ ತಿಂಗಳು ವರ್ಷ 1219 ಮೇಲೂಡಿ ಎಂದು ಬರೆಯಲಾಗಿದೆ"[17] ದ್ವೀಪದ ಸಂಗಿನ್ ಮಸೀದಿಯ ಉತ್ತರಗೋಡೆಗೆ ಒರಗಿಸಿ ನಿಲ್ಲಿಸಿರುವ ಕಲ್ಲಿನ ಶಿಲಾ ಶಾಸನದಲ್ಲಿ ಅಸ್ಪಷ್ಟವಾದ ಅಕ್ಷರಗಳಿಂದ ಕೂಡಿದ್ದು, "18-19ನೇ ಶತಮಾನದಲ್ಲಿ ತುರುಕರಿಗೆ ನೀಡಿದ ಕೊಡುಗೆಯ ಬಗ್ಗೆ ತಿಳಿಸುತ್ತದೆ". ಹೆಚ್ಚಿನ ಮಾಹಿತಿಗಳು ಅಸ್ಪಷ್ಟವಾಗಿವೆ.[18]

ದ್ವೀಪದ ಪಶ್ಚಿಮ ತುದಿಯಲ್ಲಿ ಚಂದ್ರವನ ಪ್ರವೇಶವಿದ್ದು, ಅರಸು ಮನೆತನದವರ ಸ್ಮಶಾನ ಪ್ರದೇಶವೆಂದು ಹೇಳಲಾಗುತ್ತದೆ. ಆದರೆ ಇಲ್ಲಿ ದೊರೆತಿರುವ ಶಾಸನಗಳನ್ನು ಗಮನಿಸಿದಾಗ ದೇವಾಲಯವಿದ್ದ ಕುರುಹುಗಳು ಕಂಡು ಬರುತ್ತವೆ. ಚಂದ್ರವನ ಹಂತದ ಕೊಳವೆಬಾವಿ ಬಳಿಯ ಪೊದೆಯಲ್ಲಿ ನೆಟ್ಟಕಲ್ಲಿನ ಶಿಲಾಶಾಸನವೊಂದಿದ್ದು ಅಸ್ಪಷ್ಟವಾಗಿದ್ದು ಹೋಯ್ಸಳರ ರಾಜ ನರಸಿಂಹ ದೇವನ ಆಳ್ವಿಕೆಗೆ

6 ಅಲ್ಲೇ ಶಾ.4

7 ಎ.ಗ್ರಾ.ಕ.ಸಂ.6, ಕ್ರಿಪ.ಶಾ.ಸಂ.36, ಪು.377

8 ಅದೇ. ಶಾ.21.ಪು.343

9 ಅದೇ. ಶಾ.8.ಪು.337

10 ಅದೇ. ಶಾ.6.ಪು.336

11 ಅದೇ. ಶಾ.22.ಪು.348

12 ಅದೇ. ಶಾ.23.ಪು.350

13 ಅದೇ. ಶಾ.26.ಪು.367

14 ಅದೇ. ಶಾ.24.ಪು.352

15 ಅದೇ. ಶಾ.33.ಪು.376

16 ಅದೇ. ಶಾ.44.ಪು.382

17 ಅದೇ. ಶಾ.46.ಪು.382

18 ಅದೇ. ಶಾ.45.

ಸೇರಿದುದೆಂದು ತಿಳಿದು ಬರುತ್ತದೆ. ದೊರೆಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ ಇಲ್ಲಿ ಕಟ್ಟಿಸಿದ ಮಂಟಪದ ನೆನಪಿಗಾಗಿ ಶಾಸನ ಬರೆಸಲಾಗಿದೆ.ಇದು ಚೆಲುವ ನಾರಾಯಣಸ್ವಾಮಿ ದೇವಾಲಯವೆಂದು ಹೇಳಬಹುದು. ಇನ್ನೊಂದು ಶಾಸನದ ಪ್ರಕಾರ ಚೆಲುವನಾರಾಯಣಸ್ವಾಮಿ ದೇವಾಲಯದ ಗಾರೆ ವಿಗ್ರಹಗಳ ಕೆಳಗೆ 'ನಾರಾಯಣಮೂರ್ತಿ', 'ಚಲುವರಾಯಮೂರ್ತಿ' 'ಕೇಶವಮೂರ್ತಿ' ಎಂದು ಬರೆಯಲಾಗಿದೆ ಎಂದು ಎಫಿಗ್ರಾಫಿಯಾ ಕರ್ನಾಟಕ ಸಂಪುಟ 6ರ ಶ್ರೀರಂಗಪಟ್ಟಣ ಶಾಸನ 55, 56ರಲ್ಲಿ ತಿಳಿದು ಬರುತ್ತದೆ. ಆದರೆ ಈ ಶಾಸನಗಳು ಪ್ರಸ್ತುತ ನಾಶವಾಗಿವೆ. ಖಾಲಿ ಮಂಟಪವೊಂದು ಕಂಡು ಬರುತ್ತದೆ. ತಳಪಾಯದಲ್ಲಿ ಹೋಯ್ಸಳರ ಸಿಂಹವನ್ನು ಕೊಲ್ಲುತ್ತಿರುವ ಚಿಹ್ನೆಮಾತ್ರ ಕಂಡುಬರುತ್ತದೆ.[19]

ಇದೇ ಚಂದ್ರವನದಲ್ಲಿ ಈಶ್ವರ ದೇವಾಲಯವೊಂದು ಕಂಡು ಬರುತ್ತದೆ. ಈ ದೇವಾಲಯದ ಮುಂಟಪದ ಎಡಗಡೆಯ ಕಲ್ಲಿನ ತೊಲೆಯ ಮೇಲೆ ಕನ್ನಡದ ಶಾಸನವೊಂದಿದೆ ಮತ್ತು ಬಲಗಡೆ ಕಲ್ಲಿನ ತೆಲೆಯ ಮೇಲೆ ಇಂಗ್ಲೀಷ್‌ನಲ್ಲಿ ಶಾಸನವನ್ನು ಬರೆಸಲಾಗಿದೆ. "ಕ್ರಿ.ಶ.1799 ರಿಂದ 1868 ರವರಿಗೆ ಆಳ್ವಿಕೆ ನಡೆಸಿದ ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ತಮ್ಮ ತಂದೆ ಖಾಸ ಚಾಮರಾಜ ಒಡೆಯರ್‌ರವರ ಜ್ಞಾಪಕಾರ್ಥವಾಗಿ ಶಾಲಿವಾಹನಕ 1796ರಲ್ಲಿ ಈಶ್ವರ ದೇವಾಲಯವನ್ನು ನಿರ್ಮಿಸಿದುದಾಗಿ ಬರೆಯಲಾಗಿದೆ".[20]

ದೇವಾಲಯಗಳಿಗೆ ಮಾಡುತ್ತಿದ್ದ ದಾನಧರ್ಮಗಳಲ್ಲಿ ಪುಣ್ಯ ಸಂಪಾದನೆಯೇ ಪ್ರಮುಖ ಗುರಿಯಾಗಿದ್ದು, ಸಾಮಾನ್ಯ ಜನರೂ ದೇವಾಲಯಗಳಿಗೆ ದಾನ-ದತ್ತಿಗಳನ್ನು ನೀಡಿದುದು ತಿಳಿದು ಬರುತ್ತದೆ. ಗಂಗಾಧರೇಶ್ವರ ದೇವಾಲಯದ ಗುಡಿಯ ಎದುರಿಗೆ ಶಾಲಿವಾಹನ ಶಕ 1438ರಂದು ಬರೆಸಿದ ದಾನಶಾಸನ ಇದಾಗಿದ್ದು, "ಶ್ರೀರಂಗಪುರದ ಮಹಾಜನಗಳು, ಸೀತಾಪುರದ ಮಹಾಜನಗಳು ಮುಂತಾದವರು ಗಂಗಾಧರೇಶ್ವರ ದಿನಂಪ್ರತಿ ನಾಲ್ಕುಪಡಿ ಅಕ್ಕಿಯ ನೈವೈದ್ಯಕ್ಕೆ ಹತ್ತು ಖಡುಗ ಗದ್ದೆಯನ್ನು ದಾನವಾಗಿ ನೀಡಿದುದನ್ನು ಬರೆಯಲಾಗಿದೆ".[21] ಪೇಟೆ ರಾಮದೇವಾಲಯದ 36ನೇ ಶಾನಸದ ಕೆಳಗೆ ಕ್ರಿ.ಶ.1723ರಲ್ಲಿ ಕೃಷ್ಣರಾಜ ಪಡೆಯರ ಕಾಲದಲ್ಲಿ ಶಾಸನವೊಂದನ್ನು ಬರೆಸಲಾಗಿದೆ. "ಶ್ರೀರಂಗಪಟ್ಟಣ ನಗರದಲ್ಲಿ ವಾಸಿಸುತ್ತಿದ್ದ ಹಜಾಮರು, ಅಕ್ಕಸಾಲಿಗರು ಮತ್ತು ಕೊಮಟಿಗರ ಮನೆಗಳಲ್ಲಿ ಚನ್ನಪಟ್ಟಣ ಹಾಗೂ ಅಷ್ಟಗ್ರಾಮಗಳಲ್ಲಿ ವಾಲಗ ನಡೆಸುತ್ತಿದ್ದ ಪದ್ಧತಿಯಾಗಿದ್ದು, ಅವರುಗಳು ಬಂದ ಆದಾಯದಲ್ಲಿ ನರಮಕಟ್ಟೆ ಹನುಮಂತ ದೇವರಿಗೆ ಒಂದಷ್ಟು ಭಾಗವನ್ನು ನೀಡಿದುದರ ಬಗ್ಗೆ ಈ ಗೋಡೆ ಶಾಸನದಲ್ಲಿ ದಾಖಲಿಸಲಾಗಿದೆ".[22]

ಗಂಗರ ಕಾಲವೆಂದು ಅಭಿಪ್ರಾಯವಿರುವ ಆದರೆ ವಿಜಯನಗರ ಕಾಲದ ಕುರುಹುಗಳಿರುವ ಜೈನ ಬಸದಿಯೊಂದು ಈ ದ್ವೀಪದಲ್ಲಿದ್ದು ಈ ಬಸದಿಯ ಮುಖ ಮಂಟಪದ ಎಡಗಡೆ ಗೋಡೆಗೆ ಸೇರಿದ ಕಂಬದ ಮೇಲಿನ ಕ್ರಿ.ಶ. 1589ರ ಕಂಬ ಶಾಸನದಲ್ಲಿ "ಶ್ರೀರಂಗಪಟ್ಟನದ ಆದೀಶ್ವರರ ಭಂಡಾರಕ್ಕೆ ಚಾರು ಕೀರ್ತಿ ಪಂಡಿತಾಚಾರ್ಯರ ಶಿಷ್ಯರಾದ ಪಯಣಂಗಳು... ಇತರರು ನಗದು 288ಕ್ಕೆ ಬಡ್ಡಿ 383ಕ್ಕೆ ದೇವತಾ ಕಾರ್ಯವನ್ನು ಕೈಗೊಳ್ಳುವುದಾಗಿ ಬರೆಸಲಾಗಿದೆ.[23]

ದೇವಾಲಯಗಳ ಸಂಪತ್ತನ್ನು ಹೆಚ್ಚಿಸುವುದಕ್ಕಾಗಿ ಉತ್ಸವಮೂರ್ತಿಗಳನ್ನು, ಉತ್ಸವ ಮೂರ್ತಿಯ ಅಲಂಕರಕ್ಕಾಗಿ ಆಭರಣಗಳನ್ನು, ಪೂಜಾಕೈಂಕರ್ಯಕ್ಕಾಗಿ ಬೆಳ್ಳಿ, ತಾಮ್ರ, ಹಿತ್ತಾಳೆ, ಇನ್ನಿತರ ಲೋಹದ ಪಾತ್ರೆಗಳನ್ನು ನೀಡಿದುದು ಕಂಡು ಬರುತ್ತದೆ.

ಶ್ರೀರಂಗಪಟ್ಟಣದ ಶ್ರೀ ಗಂಗಾಧರೇಶ್ವರ ದೇವಾಲಯಕ್ಕೆ ದಳವಾಯಿ ದೊಡ್ಡಯ್ಯನವರ ಪುತ್ರರಾದ ಕಳಲೆ ವೀರರಾಜಯ್ಯನವರ ಪುತ್ರರಾದ ನಂಜರಾಜಯ್ಯನವರು ಪಂಚಲೋಹದ ದಕ್ಷಿಣಮೂರ್ತಿ ವಿಗ್ರಹವನ್ನು ನೀಡಿದುದರ ಬಗ್ಗೆ ವಿಗ್ರಹದ ಪದ್ಮಪೀಠದ ಮೇಲೆ ಬರೆಯಲಾಗಿದೆ.[24] ಕ್ರಿ.ಶ.1763ರಲ್ಲಿ ಇದೇ ದೇವಾಲಯಕ್ಕೆ ನಂಜುಂಡಭಟ್ಟರ ಪುತ್ರರಾದ ಶಿವರಾಮ ಪಂಡಿತರು ತಾಂಡವೇಶ್ವರ ವಿಗ್ರಹವನ್ನು ನೀಡಿದುದರ ಬಗ್ಗೆ ಇದೇ ವಿಗ್ರಹದ ಪೀಠದ ಮೇಲೆ ಬರೆಯಲಾಗಿದೆ.[25]

ಶ್ರೀರಂಗಪಟ್ಟಣದ ಕಾಳಮ್ಮ ದೇವಾಲಯದ ಕಮಠೇಶ್ವರ ದೇವಾಲಯದ ಬಾಗಿಲಿಗೆ ಕ್ರಿ.ಶ.1787ರಲ್ಲಿ ಗೋಪಾಲಯ್ಯನವರ ಕುಮಾರ ಲಕ್ಷ್ಮಗಾಚಾರ್ಯರು ಹಿತ್ತಾಳೆ ಬಾಗಿಲಪಟ್ಟಿ ಮಾಡಿಸಿದುದನ್ನು ಬರೆಸಲಾಗಿದೆ.[26] ಇದೇ ದೇವಾಲಯಕ್ಕೆ ಕರುಪು ಸಟಿ ಎಂಬುವರು ಕಂಚಿನ ತಟ್ಟೆಯನ್ನು ನೀಡಿದುದನ್ನು ತೆಲುಗಿನಲ್ಲಿ ಬರೆಸಲಾಗಿದೆ.[27] ಇದೇ ದೇವಾಲಯದ ಕ್ರಿ.ಶ.1775ರ ಶಾಸನದಲ್ಲಿ ಸುನಾರಖಾನೆ ರಂಗಚಾರಿಯವರು ತಾಂಡವೇಶ್ವರ ವಿಗ್ರಹ ಮಾಡಿಸಿಕೊಟ್ಟಿದನ್ನು ಬರೆಯಲಾಗಿದೆ.[28] ಇದೇ ಪೀಠದ ಕೆಳಭಾಗದಲ್ಲಿ ಮಯವಂಶಸ್ಥನಾದ ಕೃಷ್ಣಮಾಚಾರಿ ಕುಮಾರನಾದ ವೆಂಕಟರಮಣ ಚಾರಿಯ ಮಾಡಿದಂತಾ ತಾಂಡವಮೂರ್ತಿ ಶಿವಕಾಮಿನಿ ಮೂರ್ತಿ ಸೇವೆ ಎಂದು ಬರೆಯಲಾಗಿದೆ.[29]

"ಶ್ರೀರಂಗನಾಥ ದೇವಾಲಯದ 18ನೇ ಶತಮಾನದಲ್ಲಿ ದಾನವಾಗಿ ನೀಡಲಾಗಿರುವ ಬೆಳ್ಳಿ ಬಟ್ಟಲಿನ ಮೇಲೆ ಟಿಪ್ಪುಸುಲ್ತಾನ್ ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರ್ ಹೆಸರುಗಳು ಕಂಡು ಬರುತ್ತವೆ.[30] ಇದೇ ದೇವಾಲಯದ ಇನ್ನೂ ಮೂರು ಬೆಳ್ಳಿ ಬಟ್ಟಲಿನ ಮೇಲೆ ಟಿಪ್ಪುಸುಲ್ತಾನ್ ದಾನವಾಗಿ ನೀಡಿದುದನ್ನು ಬರೆಯಲಾಗಿದೆ"[31] ಇದೇ ದೇವಾಲಯಕ್ಕೆ ಕಳವೆಯ ಕಾಂತ್ಯೆಯನ್ನು ಟಿಪ್ಪುಸುಲ್ತಾನನ ಹೆಸರಿನಲ್ಲಿ ಬೆಳ್ಳಿ ಪಂಚಾರತಿಯನ್ನು ದಾನವಾಗಿ ನೀಡಿದುದನ್ನು ಬರೆಯಲಾಗಿದೆ.[32] ಇದೇ ದೇವಾಲಯದ ಶ್ರೀರಂಗನಾಯಕಿ ಗುಡಿಯಲ್ಲಿರುವ ಮೂರು ಬೆಳ್ಳಿ ಬಟ್ಟಲುಗಳ ಮೇಲೆ "ಕಳಲೆ ಕಾಂತ್ಯೆಯ್ಯನವರು ಟಿಪ್ಪುಸುಲ್ತಾನ್ ರವರ ಹೆಸರಿನಲ್ಲಿ ನೀಡಲಾದ ದಾನ ಎಂದು ಬರೆಯಲಾಗಿದೆ."[33] ಈ ಮೇಲಿನ ಶಾಸನಗಳನ್ನು ಪರಿಶೀಲಿಸಿದಾಗ ಟಿಪ್ಪುಸುಲ್ತಾನನು ಶ್ರೀರಂಗನಾಥಸ್ವಾಮಿಯ ಭಕ್ತನಾಗಿದ್ದುದು ಪರಿಶೀಲಿಸಿದಾಗ ಟಿಪ್ಪುಸುಲ್ತಾನನು ಶ್ರೀರಂಗನಾಥಸ್ವಾಮಿಯ ಭಕ್ತನಾಗಿದ್ದುದು ತಿಳಿದು ಬರುತ್ತದೆ. ಕ್ರಿ.ಶ.18-19ನೇ ಶತಮಾನದಲ್ಲಿ ಇದೇ ದೇವಾಲಯಕ್ಕೆ ಸಹಸ್ರಧಾರೆ ಬೆಳ್ಳಿತಟ್ಟೆಯನ್ನು ದಾನ ನೀಡಲಾಗಿದ್ದು, ಇದರ ಮೇಲೆ "11ಶ್ವತೆ 1231 ಪ್ರಮಾರಥಿನಾಮ ಸಪಭೇಟ್. 1 ಮಹಂಜಥಿ ಜಮೇಗಿರಜೆ" ಎಂದು ನಾಗರಿಲಿಪಿಯಲ್ಲಿ ಬರೆಯಲಾಗಿದೆ. ಕ್ರಿ.ಶ.1231 ತಪ್ಪಾದ ಬರವಣಿಗೆ

[19] ಅದೇ. ಶಾ.55, 56.ಪು.389, 390

[20] ಅಲ್ಲೇ, ಶಾ.57, ಅದೇ. ಶಾ.58 ಪು.390,91

[21] ಅದೇ. ಶಾ.31 ಪು.375

[22] ಅದೇ. ಶಾ.37 ಪು.378

[23] ಅದೇ. ಶಾ.38 ಪು.379

[24] ಅದೇ. ಶಾ.29 ಪು.374

[25] ಅದೇ. ಶಾ.30

[26] ಅದೇ. ಶಾ.39 ಪು.379

[27] ಅದೇ. ಶಾ.40 ಪು.380, ಅಲ್ಲೇ, ಶಾಸನ 41. ಶಾ.42

[28] ಅದೇ. ಶಾ.43 ಪು.381

[29] ಅದೇ. ಶಾ.12 ಪು.340

[30] ಅದೇ. ಶಾ.31 ಪು.14

[31] ಅ

[32] ಅ

[33] ಅದೇ. ಶಾ.16 ಪು.341

ಎಂದು ಹೇಳಲಾಗಿದೆ.[34] ಅದೇದ್ವೀಪಸ್ತಾನದಲ್ಲಿ ಮತ್ತೊಂದು ಬೆಳ್ಳಿಗೆ ಬಟ್ಟಲಿನ ಮೇಲೆ "ಮೊದಲು ಸ್ವಾಂಮ್ಯದ ರಂಗಪಕ್ತಿ ಶ್ರೀರಂಗರಾಜನ ಕೈಯಂಕರ್ಯ ರೂಪಾಯಿಗಳ" ಎಂದು ಬರೆಯಲಾಗಿದೆ.[35] ಅದೇ ಗುಡಿಯಲ್ಲಿ ಬೆಳ್ಳಿ ಗಿಂಡಿಯ ಮೇಲೆ" ಶ್ರೀರಂಗನಾಯಕಿಗಾರಿ ಸಂನಿದಿಯಂದು ಶ್ರೀರಾಮಾನುಜಪರ ಕಾಲಸ್ವಾಮೀವಾರಿ ಕೈಯಂಕರ್ಯಂ" ಎಂದು ತೆಲುಗಿನಲ್ಲಿ ಬರೆಯಲಾಗಿದೆ[36] ಈ ಶಾಸನಗಳೆಲ್ಲವೂ ದೇವಾಲಯಗಳ ಪೂಜೆ ಪುನಸ್ಕಾರಗಳಿಗೆ ಅನ್ವಯವಾಗಿ ನೀಡಲಾದ ದಾನಗಳ ಬಗ್ಗೆ ತಿಳಿಸಿಕೊಡುತ್ತವೆ.

ಕೆರೆಗಳನ್ನು ಕಟ್ಟಿಸುವುದು, ಬಾವಿಗಳನ್ನು ತೆಗೆಸುವುದು, ಕಾಲುವೆಗಳನ್ನು ತೋಡಿಸುವುದು, ಸೇತುವೆಗಳನ್ನು ಕಟ್ಟಿಸುವುದು, ಪುಷ್ಪಕರಣಿಗಳನ್ನು ನಿರ್ಮಿಸಿರುವುದು ತಿಳಿದು ಬರುತ್ತದೆ. ಇವೆಲ್ಲವನ್ನು ನಮ್ಮ ಹಿರಿಯರು ದೇವರ ಸೇವೆಗಾಗಿಯೋ, ಜನರಸೇವೆಗಾಗಿಯೋ ಕೈಗೊಳ್ಳುತ್ತಿದ್ದರೆಂದು ಅಭಿಪ್ರಾಯವಿದೆ.

ಶ್ರೀರಂಗಪಟ್ಟಣ ಗೌತಮ ಕ್ಷೇತ್ರದ ಎದುರಿಗೆ ಕಾವೇರಿ ನದಿಯ ಉತ್ತರ ದಡದ ಸಮೀಪ ಗದ್ದೆಯೊಂದರಲ್ಲಿ ದೊರೆತಿರುವ ಶಿಲಾ ಶಾಸನವು 9–10ನೇ ಶತಮನಾದ್ದಾಗಿದ್ದು, ಸತ್ಯವಾಕ್ಯ ಪೆರ್ಮನಡಿಯ ಕಾಲದಲ್ಲಿ, ಕಾವೇರಿ ನದಿಗೆ 'ತಲೆ ನೆರೆ' ಎಂಬಲ್ಲಿ ಸೇತುವೆ ಕಟ್ಟಲು 'ಕೇಸಿನ' ಎಂಬ ಅಧಿಕಾರಿಗೆ ಶ್ರೀಮತಿ ಸಾಗರಭಟಾರರ ಆದೇಶದ ಮೇರೆಗೆ ಕ್ರಿ.ಶ.904–05ರಲ್ಲಿ ಅವಕಾಶ ಮಾಡಿಕೊಟ್ಟುದರ ಬಗ್ಗೆ ಬರೆಯಲಾಗಿದೆ. ಗಂಗರ ಕಾಲದ ಶಾಸನ ಎಂದು ತಿಳಿದು ಬರುತ್ತದೆ.[37]

ಶ್ರೀರಂಗನಾಥ ದೇವಾಲಯದ ಈಶಾನ್ಯ ದಿಕ್ಕಿನಲ್ಲಿರುವ ಕೊಳದ ಬಾಗಿಲ ನೆಟ್ಟಕಲ್ಲು ಶಾಸನದಲ್ಲಿ, "ಕ್ರಿ.ಶ.1722 ರಲ್ಲಿ ಶ್ರೀಕೃಷ್ಣರಾಜ ಒಡೆಯರು ಶ್ರೀರಂಗಪಟ್ಟಣದಲ್ಲಿ ಆಳ್ವಿಕೆ ಮಾಡುತ್ತಿರಲು, ನಲ್ಲ ತಂಬಿ ಮೊದಲಿಯಾರ್ ಶ್ರೀ ಪಶ್ಚಿಮ ರಂಗನಾಥಸ್ವಾಮಿಯವರ ಸನ್ನಿಧಿಗೆ ಸ್ವಾಮಿಯವರ ತಿರುಮಂಜನ ಕೈಂಕರ್ಯ ಮತ್ತು ಬ್ರಾಹ್ಮಣರುಗಳ ಸ್ನಾನ ಪಾನಾದಿಗಳ ಉಪಯೋಗಕ್ಕಾಗಿ 'ವೇದ ಪುಷ್ಕರ್ಣಿ'ಯನ್ನು ನಿರ್ಮಿಸಿದನ್ನು ಬರೆಯಲಾಗಿದೆ. ಈ ಶಾಸನವು ಕನ್ನಡ ಭಾಷೆಯ 17 ಸಾಲುಗಳಿಂದ ಕೂಡಿದೆ. ಇದೇ ಶಾಸನದ[38] ಕೆಳಭಾಗದಲ್ಲಿ ಕೆಲವು ಸಾಲುಗಳು ತಮಿಳು ಭಾಷೆಯಲ್ಲಿದ್ದು, "ನಲ್ಲತಂಬಿ ಮೊದಲಿಯರ್‌ನ ತಂದೆ ವೇಲಾಯುಧ ಮೊದಲಿಯರ್‌ನ್ನು ತೊಂಡಮಂಡಲ ನಾಡಿನ ಶಿವಗೋತ್ರದವನು, ತುಳುವ ವೆಲಾಲ ಕುಟುಂಬಕ್ಕೆ ಸೇರಿದವನು", ಎಂದು ಬರೆಯಲಾಗಿದೆ.[39] ಈ ಶಾಸನವು ಇತ್ತೀಚಿನವರೆಗೂ ಸುಸ್ಥಿತಿಯಲ್ಲಿದೆ. ಆದರೆ ಪುಷ್ಕರಣಿ ಮಾತ್ರ ಜೀರ್ಣಾವಸ್ತೆಯಲ್ಲಿದ್ದು, ಒಂದು ಚಿಕ್ಕ ಕೈಗಾಲುವೆಯಾಕಾರದ ಸುರಂಗವನ್ನು ಇತ್ತೀಚೆಗೆ ಶೋಧಿಸಲಾಗಿದೆ. ಪುಸ್ಕರಣಿಯಲ್ಲಿ ಹೆಚ್ಚಾದ ನೀರು ಇದರ ಮೂಲಕ ಹೊರ ಹೋಗಲು ಮಾಡಿದ ಕೊಳವೆ ಎಂದು ಅಭಿಪ್ರಾಯ ಪಡಲಾಗಿದೆ.

ಶ್ರೀರಂಗಪಟ್ಟಣದ ಉತ್ತರದಲ್ಲಿ ಕಾವೇರಿ ನದಿಗೆ ಕಟ್ಟಿರುವ ಸೇತುವೆಯ ಉತ್ತರಭಾಗದಲ್ಲಿ ಶಿಲಾಶಾಸನವೊಂದು ಇಂಗ್ಲೀಷ್ ಭಾಷೆಯಲ್ಲಿದೆ. "ಕಾವೇರಿ ನದಿಗೆ ಉತ್ತರದಲ್ಲಿ ಸೇತುವೆಯನ್ನು ಕ್ರಿ.ಶ.1802 ಆಗಸ್ಟ್‌ನಲ್ಲಿ ಪ್ರಾರಂಭಿಸಿ 1804 ರಲ್ಲಿ ಪೂರ್ಣಗೊಳಿಸಲಾಗಿದೆ. ಅಂದಿನ ದಿವಾನರಾಗಿದ್ದ ರಿಚರ್ಡ್ ಮಾರ್‌ಕ್ವಿಸ್ಟ್ ವೆಲ್ಲೆಸ್ಲಿ.ಕೆ.ಪಿ. ಇವರ ಜ್ಞಾಪಕಾರ್ಥವಾಗಿ ದಿವಾನ್ ಪೂರ್ನಯ್ಯನವರ ಜವಾಬ್ದಾರಿ ವಹಿಸಿ ನಿರ್ಮಿಸಿದ ಸೇತುವೆ ಇದಾಗಿದೆ." ಎಂದು ಬರೆಸಲಾಗಿದೆ. ಇಂದಿಗೂ ಇದನ್ನು 'ವೆಲ್ಲೆಸ್ಲಿ ಬ್ರಿಡ್ಜ್' ಎಂದೇ ಕರೆಯಲಗುತ್ತಿದೆ.[40]

ವೆಲ್ಲೆಸ್ಲಿ ಸೇತುವೆಯ ಬಳಿ 53ನೆಯ ಶಾಸನದ ಕೆಳಗಿನ ಶಿಲಾಶಾಸನವು ಪರ್ಷಿಯನ್ ಭಾಷೆಯಲ್ಲಿದೆ. "ಈ ಸೇತುವೆ ನಿರ್ಮಾಣ ಕಾರ್ಯದ ಸಂದರ್ಭದಲ್ಲಿ ಕೃಷ್ಣರಾಜ ಒಡೆಯರ್ ಮೈಸೂರಿನ ರಾಜನಾಗಿದ್ದು, ರಿಚರ್ಡ್ ಮಾರ್‌ಕ್ವೂಸ್ ವೆಲ್ಲೆಸ್ಲಿ.ಕೆ.ಪಿ. ಗೌರ್ನರ್ ಜನರಲ್ ಆಗಿದ್ದು ಬ್ರಿಟೀಷ್ ಆರ್ಮಿಯ ಸಹಕಾರದೊಂದಿಗೆ, ದಿವಾನ್ ಪೂರ್ಣಯ್ಯನವರ ನೇತೃತ್ವದಲ್ಲಿ ಆಗಸ್ಟ್ 1802ರಲ್ಲಿ ಪ್ರಾರಂಭಿಸಿ ಅಕ್ಟೋಬರ್ 1804ರಲ್ಲಿ ಈ ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸಲಾಯಿತೆಂದು ಬರೆಯಲಾಗಿದೆ."[41]

ವಿದ್ಯೆಯ ಪ್ರಸಾರ, ಧರ್ಮಪ್ರಸಾರ, ಸಂಸ್ಕೃತಿ ಪ್ರಸಾರ ಮುಂತಾದ ಕ್ಷೇತ್ರಗಳಲ್ಲಿ ಬ್ರಾಹ್ಮಣರನ್ನು ತೊಡಗಿಸುವ ಸಲುವಾಗಿ ದೊರೆಗಳು ವಿಶೇಷವಾದ ದಾನಧರ್ಮಗಳನ್ನು ನೀಡುತ್ತಿದ್ದುದು ತಿಳಿದು ಬರುತ್ತದೆ. ಶ್ರೀರಂಗನಾಥ ದೇವಾಲಯದಲ್ಲಿರುವ ಐದನೆಯ ತಾಮ್ರ ಶಾಸನವು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ಬರೆಯಲ್ಪಟ್ಟಿದೆ. "ವಿಜಯನಗರದ ಅರಸು ಇಮ್ಮಡಿ ದೇವರಾಯನು ಕ್ರಿ.ಶ.1352ರಲ್ಲಿ 'ರತ್ನದೇನು' ಮಹಾದಾನವನ್ನು ಮಾಡುವ ಸಂದರ್ಭದಲ್ಲಿ ತೋರಿನಾಡ ಮೇಲತೆಯವ ಮೇನಾಪುರ ಮಾಗಣಿಯೊಳಗಣ ಚಂದಿಗಾಲ ಗ್ರಾಮವನ್ನು ವೃತ್ತಿಗಳಾಗಿ ವಿಭಜಿಸಿ ಹಲವಾರು ಬ್ರಾಹ್ಮಣರಿಗೆ ದಾನ ಮಾಡಿದನೆಂದು ಈ ಶಾಸನ ತಿಳಿಸುತ್ತದೆ.[42]

ರಾಜ ಮಹಾರಾಜರ ವಂಶಾವಳಿಗಳನ್ನು ತಿಳಿಸುವ ಶಾಸನಗಳೂ ಶ್ರೀರಂಗಪಟ್ಟಣ ಸೀಮೆಯಲ್ಲಿ ಕಂಡು ಬರುತ್ತವೆ. ಶ್ರೀರಂಗಪಟ್ಟಣ ಗಂಜಾಂ ಕೊತ್ವಾಲ್ ನಾರಣಪ್ಪನವರ ಮನೆಯಲ್ಲಿ ದೊರೆತಿರುವ ಐದು ತಾಮ್ರದ ಪ್ಲೇಟುಗಳಲ್ಲಿ ಕನ್ನಡದಲ್ಲಿ ಬರೆಯಲಾಗಿರುವ, "ಗಂಗವಂಶದ 'ಮಾರಸಿಂಗ ಎರಿಯಪ್ಪ' ಈ ಪ್ರಾಂತ್ಯವನ್ನು ಆಳ್ವಿಕೆ ಮಾಡುತ್ತಿದ್ದ ಕಾಲದಲ್ಲಿ, ಅಂದಿನ ವರೆಗಿನ ಗಂಗರ ವಂಶಾವಳಿಯನ್ನು ಪಟ್ಟಿ ಮಾಡಲಾಗಿದೆ. ಇವರ ರಾಜಲಾಂಛನ 'ಆನೆ'ಯನ್ನು ಈ ಶಾಸನದ ಮೇಲೆ ಬರೆದಿರುವುದು ಕಂಡು ಬರುತ್ತದೆ.[43] ಇದರಿಂದ ಗಂಗರ ಕಾಲಕ್ಕಾಗಲೇ ಶ್ರೀರಂಗಪಟ್ಟಣ ಪ್ರವೇಶ ಪ್ರಮುಖ ಸ್ಥಾನ ಪಡೆದು ಕೊಂಡಿತ್ತು ಎಂಬ ತೀರ್ಮಾನಕ್ಕೆ ಬಹುದಾಗಿದೆ.

"ಶ್ರೀರಂಗಪಟ್ಟಣದ ಭಂಡಾರದಲ್ಲಿರುವ ತಾಮ್ರಪಟವು ಕ್ರಿ.ಶ.1686ರಲ್ಲಿ ಚಿಕ್ಕದೇವರಾಜ ಒಡೆಯರ್ ಅವರ ವಂಶಾವಳಿಯ ವಿವರಗಳನ್ನು ನೀಡಿದೆ ಮತ್ತು ಈ ಶಾಸನದಲ್ಲಿ ಚಿಕ್ಕದೇವರಾಜರ 'ಹಸ್ತಾಕ್ಷರ'ವೂ ಇರುವುದು ಕಂಡುಬರುತ್ತದೆ".[44] ಆದರೆ ಈ ಶಾಸನವು ಎಫಿಗ್ರಾಫಿಯೂ ಕರ್ನಾಟಕದಲ್ಲಿ ದಾಖಲಾಗಿರುವುದಿಲ್ಲ.

ಶ್ರೀರಂಗಪಟ್ಟಣದಲ್ಲಿ ದೊರೆತಿರುವ ಶಾಸನಗಳಲ್ಲಿ ಮಹಿಳೆಯರ ಹೆಸರುಗಳು ನಮೂದಿತವಾಗಿರುವುದು ಕಂಡು ಬರುತ್ತದೆ. ಇಲ್ಲಿನ ಐದು ಶಾಸನಗಳಲ್ಲಿ ಮಹಿಳೆಯರ ಉಲ್ಲೇಖ ದೊರೆಯುತ್ತದೆ.

ಕರಿಘಟ್ಟ ಬೆಟ್ಟದ ಶ್ರೀನಿವಾಸ ದೇವಾಲಯದಲ್ಲಿರುವ ಮೂರು ಶಾಸನಗಳು ದಾನ ಶಾಸನಗಳಾಗಿದ್ದು, ಮಹಿಳೆಯರೇ ನೀಡಿದ ದಾನದ ವಿವರಗಳನ್ನು ಒಳಗೊಂಡಿದೆ. ಈ ದೇವಾಲಯದ ಅಡಿಗೆ ಮನೆ ಬಾಗಿಲುವಾಡದ ಮೇಲೆ ಕ್ರಿ.ಶ.1764 ರಲ್ಲಿ ಶಾಸನ ಬರೆಸಿದ್ದು, 'ಕಲ್ಯಾಣಮ್ಮ' ಎಂಬ ಮಹಿಳೆಯನ್ನು ಉಲ್ಲೇಖಿಸುತ್ತದೆ. ಈಕೆ ಧರ್ಮಾರ್ಥವಾಗಿ ಇಲ್ಲಿನ ಶ್ರೀನೃಸಿಂಹಸ್ವಾಮಿ ದೇವಾಲಯಕ್ಕೆ 9

[34] ಅಲ್ಲೇ, ಶಾಸನ 15

[35] ಅಲ್ಲೇ ಶಾ.17

[36] ಅಲ್ಲೇ, ಶಾಸನ, 18

[37] ಅದೇ ಶಾಸನ 85, ಪುಟ 410

[38] ಅದೇ ಶಾಸನ 19, ಪುಟ 342

[39] ಅಲ್ಲೇ, ಶಾಸನ, 20

[40] ಅದೇ, ಶಾಸನ, 53, ಪುಟ 388

[41] ಅದೇ ಶಾ.54, ಪುಟ 389

[42] ಅದೇ ಶಾ.25, ಪುಟ 359

[43] ಅದೇ ಶಾ.66, ಪುಟ 397

[44] ಮಂಡ್ಯ ಜಿಲ್ಲಾ ಗ್ಯಾಜೇಟಿಯರ್, ಇತಿಹಾಸ, ಪುಟ 85

ಅಂಕಣ ಪಾಕಶಾಲೆಯನ್ನು ಕಟ್ಟಿಸಿಕೊಟ್ಟಳೆಂದು ಬರೆಸಲಾಗಿದೆ".[45] ಇದೇ ದೇವಾಲಯದ ಮಠದ ಬಾಗಿಲ ಮೇಲೆ 1769ರ ಶಾಸನದಲ್ಲಿ 'ನಾಚಾರಮ್ಮ' ಎಂಬ ಮಹಿಳೆಯನ್ನು ಉಲ್ಲೇಖಿಸುತ್ತದೆ. "ಶ್ರೀನಿವಾಸ ಕ್ಷೇತ್ರವಾದ ಶ್ರೀರಂಗಪಟ್ಟಣದ ರಾಮಯ್ಯಂಗಾರ ಪುತ್ರಿಯಾದ ಈಕೆ ಎಂಟು ಅಂಕಣದ ಶಿಲಾಮಂಟಪವನ್ನು ಮಾಡಿಸಿ ಶ್ರೀನಿವಾಸ ದೇವರಿಗೆ ಸಮರ್ಪಿಸಿದಳು"[46] ಎಂದು ಬರೆಯಲಾಗಿದೆ. ಇದೇ ದೇವಾಲಯದ ಮಠದ ಎದುರು ಕಾವೇರಿ ಹೊಳೆಗೆ ಇಳಿಯುವ ಮೆಟ್ಟಿಲಿನ ಮೇಲೆ ಕ್ರಿ.ಶ.18–19ನೇ ಶತಮಾನದ ಶಿಲಾಶಾಸನವೊಂದು ಕಂಡು ಬರುತ್ತದೆ. ಅದರಲ್ಲಿ "ವಾರಣಾಸಿ ನಂಜಮ್ಮನ ಸೇವೆ" ಎಂದು ಬರೆಸಲಾಗಿದೆ.[47]

ಶ್ರೀರಂಗಪಟ್ಟಣದ ನೆಲಮನೆ ನಾರಾಯಣಸ್ವಾಮಿ ದೇವಾಲಯದ ಮುಂದೆ ಇರುವ ಕಲ್ಲುಗಳಿಗೂ ಕ್ರಿ.ಶ.1458ರ ಶಿಲಾಶಾನವೊಂದು ಕಂಡು ಬರುತ್ತದೆ. ಈ ಶಾಸನದಲ್ಲಿ "ನಾಗಮಂಗಲ ಪ್ರಭು ತಿಮ್ಮಣ್ಣ ಪತ್ನಿ ರಂಗಾಂಭಿಕೆಯ ಪ್ರಾರ್ಥನೆಯಂತೆ ಯದುಗಿರಿಯ ಲಕ್ಷ್ಮೀ ದೇವಾಲಯದಲ್ಲಿ ನಿತ್ಯಪೂಜೆಗಾಗಿ ಶ್ರೀರಂಗಪಟ್ಟಣ ಸೀಮೆಯ ಬಲ್ಲೇನಹಳ್ಳಿ ಮತ್ತು ಯಲವನಹಳ್ಳಿಗಳನ್ನು ದತ್ತಿಯಾಗಿ ಬಿಟ್ಟ ವಿಚಾರವನ್ನು ತಿಳಿಸುತ್ತದೆ."[48]

ದೇವಾಲಯ ಕಟ್ಟಿಸಿದುದರ ಅಥವಾ ದುರಸ್ಥಿ ಗೊಳಿಸಿದವರ ನೆನಪಾಗಿ ಶಾಸನಗಳನ್ನು ಬರೆಸುವದು ರೂಢಿ. ಆದರೆ ಶ್ರೀರಂಗಪಟ್ಟಣದ ಶ್ರೀ ಲಕ್ಷ್ಮೀನರಸಿಂಹ ದೇವಾಲಯವನ್ನು ಕಟ್ಟಿಸಿದ ಶ್ರೀ ಕಂಠೀರವ ನರಸರಾಜರ ಪ್ರತಿಮೆಯನ್ನು ರಂಗಮಂಟಪದ ಎಡಭಾಗದ ಕೊಠಡಿಯಲ್ಲಿ ಕೆತ್ತಿಸಿ ನಿಲ್ಲಿಸಲಾಗಿದೆ. ಅದರ ಮೇಲೆ [49]"ಕಂಠೀರವ ನರಸರಾಜ ವಡೆಯರ್‌ರವರು' ಎಂದು ಬರೆದಿರುವುದು ಕಂಡು ಬರುತ್ತದೆ. ಇದರ ವಿಶೇಷವೆಂದರೆ ತಮ್ಮ ಪ್ರತಿಮೆಯನ್ನು ನಿರ್ಮಿಸಿ ಶಾಸನ ಬರೆಸುವುದು.

ರಾಜಮಹಾರಾಜರು ತಾವು ನಿರ್ಮಿಸಿದ ದೇವಾಲಯ ಅಥವಾ ತಾವು ನಂಬಿದ ದೇವರನ್ನು ಸ್ತುತಿಸಿ ಶಾಸನ ಬರೆಸಿರುವುದು ಕಂಡು ಬರುತ್ತದೆ. ಶ್ರೀರಂಗನಾಥ ದೇವಾಲದಲ್ಲೇ ಹೆಚ್ಚು ಸ್ತುತಿ ಶಾಸನಗಳು ಕಂಡು ಬರುತ್ತವೆ.

ಶ್ರೀರಂಗನಾಥ ದೇವಾಲಯದ ಗರ್ಭಗೃಹದ ಹೊರಗೋಡೆಯ ದಕ್ಷಿಣ ತಳಪಾದಿಯ ಕೆಳಪಟ್ಟಿಯಲ್ಲಿ ತಮಿಳು ಭಾಷೆಯಲ್ಲಿ ವಿಷ್ಣುವನ್ನು ಸ್ತುತಿಸುವ ಶಾಸನವನ್ನು ಕ್ರಿ.ಶ.1132ರಲ್ಲಿ ಕೆತ್ತಿಸಲಾಗಿದೆ. ಸಂಸ್ಕೃತ ಭಾಷೆಯನ್ನೂ ಒಳಗೊಂಡಿದೆ.[50] ಅದೇ ದೇವಸ್ಥಾನದ ಒಳಪ್ರಾಕಾರದ ಪಶ್ಚಿಮ ಗೋಡೆಯ ವಾಯುವ್ಯ ಮೂಲೆ ಚಪ್ಪಡಿಯ ಮೇಲಿನ ಶಾಸನ ಅಸ್ಪಷ್ಟವಾಗಿದ್ದು "ನಾರಾಯಣ ಗೋವಿಂದ... ತಿರುವಲಯ್ಯ" ಎಂಬ ಪದಗಳು ಕಂಡುಬರುತ್ತವೆ.[51] ಅದೇ ದೇವಾಲಯದಲ ಉತ್ತರಗೋಡೆಯ ಕಲ್ಲಿನ ಮೇಲೆ 17ನೇ ಶತಮಾನದಲ್ಲಿ "ಶ್ರೀಹರಿರಾಮ ನಾರಾಯಣ ಕೃಷ್ಣ ಸರ್ವೋತ್ತಮ ರಂಗನಾಥ ಗೋವಿಂದ" ಎಂದು ಸ್ತುತಿಗಳನ್ನು ಕೆತ್ತಿಸಲಾಗಿದೆ.[52] ಅದೇ ದೇವಸ್ಥಾನದಲ್ಲಿ ಧ್ವಜಸ್ತಂಭಕ್ಕೆ ಪೂರ್ವ ಚತುರ್ವಿಂಶತಿ ಕಂಬಗಳಲ್ಲಿ ಬಲಗಡೆ ಕಂಬದ ಪ್ರತಿಮೆಗಳ ಕೆಳಗೆ[53] ಅದೇ ಸ್ಥಳದಲ್ಲಿ ಎಡಗಡೆ ಕಂಬದ ಮೇಲೆ,[54] ಹರಿ, ನರಸಿಂಹ, ಪ್ರದ್ಯುಮ್ನ, ಶ್ರೀಕೃಷ್ಣ, ಅಜಾತ, ಅನಿರುದ್ಧ, ಜನಾರ್ಧನ, ಮಧುಸೂಧನ, ನಾರಾಯಣ... ಹೀಗೆ ವಿಷ್ಣುವಿನ ವಿವಿಧ ಹೆಸರುಗಳನ್ನು ಬರೆಯಲಾಗಿದೆ.







[45] ಎ.ಗ್ರಾ.ಕ.ಸಂ.6 ಶಾಸನ 81 ಪುಟ–408
[46] ಅದೇ ಶಾ.82, ಪುಟ 409
[47] ಅಲ್ಲೇ ಶಾ.83
[48] ಅದೇ ಶಾ.93, ಪುಟ 413
[49] ಅದೇ ಶಾ.32, ಪುಟ 376
[50] ಅದೇ ಶಾ.01, ಪುಟ 331
[51] ಅದೇ ಶಾ.07, ಪುಟ 337
[52] ಅದೇ ಶಾ.09, ಪುಟ 339
[53] ಅಲ್ಲೇ ಶಾ.10
[54] ಅದೇ ಶಾ.11, ಪುಟ 340

**ನಿರ್ಣಯಗಳು**

ಶ್ರೀರಂಗಪಟ್ಟಣ ದ್ವೀಪದಾದ್ಯಂತ ಎಫಿಗ್ರಾಫಿಯಾ ಕರ್ನಾಟಕ ಸಂಪುಟಗಳಲ್ಲಿ ದಾಖಲಿಸಬಹುದಾದ ಇನ್ನೂ ಹಲವಾರು ಮಹತ್ವದ ಶಾಸನಗಳು ಕಂಡು ಬರುತ್ತವೆ. ಅವುಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

1. ಟಿಪ್ಪುಸುಲ್ತಾನನು ಮೃತಪಟ್ಟಿರುವ ಜಾಗದಲ್ಲಿ ನೆಟ್ಟಿರುವ ಶಿಲಾಶಾಸನ.
2. ಅಬೆದುಬುವ ಚರ್ಚ್‌ನಲ್ಲಿನ ಗಂಟೆಯ ಮೇಲೆ ಬರೆದಿರುವ 'ಕ್ರಿ.ಶ.1800' ಎಂಬ ಇಸವಿಯ ಶಾಸನ.
3. ಕರ್ನಲ್ ವಿಲಿಯಂ ಬೇಲಿಯ ಸ್ಮಾರಕದಲ್ಲಿ ಬರೆದಿರುವ ಗೋಡೆ ಶಾಸನ.
4. ಕೆಂಪನಂಜಮ್ಮಣ್ಣಿಯವರ ಸಮಾಧಿ ಬಳಿ ಬರೆದಿರುವ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ದಾಖಲಾಗಿರುವ ಶಿಲಾಶಾಸನ.
5. ಜಿ.ಬಿ.ಗೇಟಿನ ಕಾವೇರಿ ತೀರದಲ್ಲಿರುವ ವಿರಗಲ್ಲು.
6. ಪಶ್ಚಿಮ ವಾಹಿನಿಯಲ್ಲಿ 1948ರ ಫೆಬ್ರವರಿ 12 ರಂದು ಗಾಂಧೀಜಿ ಅವರ ಚಿತಾಭಸ್ಮ ವಿಸರ್ಜನೆ ಮಾಡಿದ ಸ್ಥಳದಲ್ಲಿನ ಶಿಲಾಸ್ಮಾರಕದ ಬರಹಗಳು.

ಈ ಮೇಲ್ಕಂಡ ಶಾಸನಗಳನ್ನು ಎಫಿಗ್ರಾಫಿಯಾ ಕರ್ನಾಟಕ, ಇನ್ನಿತರ ಸರ್ಕಾರಿ ಪ್ರಾಯೋಜಿತ ದಾಖಲಾತಿಗಳಲ್ಲಿ ದಾಖಲು ಮಾಡಿ ಪರಿಚಯಿಸುವ ಕಾರ್ಯ ಆಗಬೇಕಿದೆ.